# ನಾಂದಿಪದ

ಸಾಹಿತ್ಯವನ್ನು ನಾವು ಭಾಷೆಯ ಸೊಬಗಿಗಾಗಿಯೂ ಓದುತ್ತಿರುತ್ತೇವೆ. ನುಡಿಯ ಅಂದವನ್ನು ಕಣ್ಣಿನ ಮೂಲಕ ಕೇಳಿಸಿಕೊಳ್ಳಲು ಕನ್ನಡದ ಹಲವು ಕೃತಿಗಳ ಕಡೆ ನಾವು ಮತ್ತೆಮತ್ತೆ ಹೋಗುವುದುಂಟು. ಕಾವ್ಯ ಮಾತ್ರವಲ್ಲ, ಗದ್ಯದ ಕೆಲವು ಪುಟಗಳ ಓದು ನಮ್ಮ ಚೈತನ್ಯವನ್ನು ಮರಳಿ ತಂದುಕೊಡಬಲ್ಲುದು, ಉತ್ಸಾಹ ತುಂಬಬಲ್ಲುದು. ಗದ್ಯಕ್ಕೆ ಕಾವ್ಯಕ್ಕೆ ಇದ್ದಂತೆ ಒಂದು ಮೀಮಾಂಸೆ ಇಲ್ಲ. ಗದ್ಯ ಮಾತ್ರ ಕಾವ್ಯವಾಗುವ ಆಶಯವನ್ನೇ ಹೊಂದಿರುತ್ತದೆ. ನಿತ್ಯವೂ ಆಡುವ ನುಡಿಯನ್ನೇ ಬರಹವನ್ನಾಗಿ ಪರಿವರ್ತಿಸುವ ಕಾಯಕದಲ್ಲಿ ಲೇಖಕರು ತೊಡಗಿರುತ್ತಾರೆ. ಕಂಡು– ಕೇಳಿದ, ತಿಂದು–ಉಂಡ, ಮೂಸಿ, ಮುಟ್ಟಿದ ಅನುಭವ ನಮ್ಮ ಬರವಣಿಗೆಯಲ್ಲಿ ಬಂದಾಗ ಅದು ಮನುಷ್ಯನನ್ನು ತಾಕುವ ಅನುಭವವಾಗಿ ಬೆಳೆಯುತ್ತದೆ.



ಒಂದೇ ದಿಕ್ಕಿನ ಕಡೆ ಚಲಿಸುವ ಬರಹ ನಮ್ಮ ಸಂವೇದನೆಗೆ ಹೊಸದೇನನ್ನೂ ಸೇರಿಸಲಾರದು. ಇಂತಹ ಚಪ್ಪಟೆ ಬರಹಗಳು ನಮ್ಮ ಗಮನ ಸೆಳೆಯದೇ ಕಣ್ಣಮುಂದೆ ಹಾಯುತ್ತಲೇ ಇರುವ ಜನರ ತರಹ ಸುಮ್ಮನೆ ಇರುತ್ತವೆ. ಹಲವು ದಿಕ್ಕುಗಳತ್ತ ತನ್ನ ರೆಂಬೆ, ಕೊಂಬೆಗಳನ್ನು ಚಾಚಿರುವ ಬರವಣಿಗೆ ಎಂಬ ಮರ ತನ್ನ ಉಲಿಯ ಎಲೆ, ಬೇರುಗಳ ಮೂಲಕ ಹೀರಿಕೊಂಡದ್ದನ್ನು ತನ್ನಲ್ಲಿ ಇಟ್ಟುಕೊಂಡಿರುತ್ತದೆ. ಅಂತಹ ಬರಹ ಹೊಸ ಗಾಳಿ ಬೆಳಕನ್ನು ಕೂತಲ್ಲೇ ನಮಗೆ ಕೊಡಬಲ್ಲುದು. ಕನ್ನಡದ ಅತ್ಯುತ್ತಮ ಎಂದು ಪರಿಗಣಿತವಾದ ಅನೇಕ ಬರಹಗಳು ಈ ರೀತಿಯವು. ಗದ್ಯದಲ್ಲಿ ಸ್ಫಟಿಕ ಶುಭ್ರತೆ ಇಲ್ಲವೇ ಪಾರದರ್ಶಕತೆ ಬಹಳ ಮುಖ್ಯ. ಅದರಲ್ಲಿ ಏನನ್ನೂ ಮುಚ್ಚಿಡಲು ಸಾಧ್ಯವಿಲ್ಲ. ಹರಿವ ನೀರಿನ ಆಳ, ತಳದಲ್ಲಿನ ಉಸುಕು, ಚಿಪ್ಪು, ಎಲೆ, ಕೊನೆಗೆ ನಾವೂ ಅದರಲ್ಲಿ ಕಾಣಬೇಕು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹಾಗೆ ಕಾಣಿಸುವ ಲೇಖಕರು ತುಂಬ ಇದ್ದಾರೆ. ಕುವೆಂಪು, ಕಾರಂತ, ತೇಜಸ್ವಿ, ಲಂಕೇಶ್, ಯಶವಂತ ಚಿತ್ತಾಲ, ಅನಂತಮೂರ್ತಿ, ಜಯಂತ ಕಾಯ್ಕಿಣಿ, ವೀಣಾ ಶಾಂತೇಶ್ವರ, ವೈದೇಹಿ ಹೀಗೆ ಇವರೆಲ್ಲ ನಮ್ಮ ಓದಿನ ಸುಖಕ್ಕಾಗಿ ಒದಗುವ ಸಖ, ಸಖಿಯರು.

ಅನೇಕ ಲೇಖಕರ ಬರವಣಿಗೆಯ ಸಾಧಾರಣ ಗುಣಕ್ಕೆ ಸೋಮಾರಿತನವೂ ಕಾರಣವಿರಬೇಕು. ಉತ್ತಮ ಬರಹವು ಅವರವರ ಆಳವಾದ, ಹರಿತವಾದ ಗ್ರಹಿಕೆ, ಬೆವರಿನ ಫಲವಾಗಿರುತ್ತದೆ; ಪರಸ್ಪರ ಅದು ಭಿನ್ನವೂ ಆಗಿರುತ್ತದೆ. ಯಾವ ಪದದ ಬಳಿಕ ಯಾವ ಪದ ಬಂದರೆ ಚೆನ್ನ, ಬರೆದದ್ದು ಕನ್ನಡದ ನುಡಿಗಟ್ಟಿಗೆ ಸರಿಹೊಂದುತ್ತದೆಯೇ, ಬಳಸುತ್ತಿರುವ ಭಾಷೆಯ ಬಾಗು ಬಳಕು, ಲಯ, ಛಂದ ಓದುಗರನ್ನು ಸೆಳೆಯಬಹುದೆ? ಯಾವುದು ಅಪಸ್ವರ, ಯಾವ ಮಾತು ತನ್ನ ಅನುಭವಕ್ಕೆ, ವರ್ಣನೆಗೆ ಸಮೀಪವಾಗಿದೆ ಎಂಬುದನ್ನು ಆಗಾಗ ಉತ್ತಮ ಲೇಖಕ ಕೇಳಿಕೊಳ್ಳುತ್ತಿರುತ್ತಾನೆ. ನುಡಿಯ ಬಿಟ್ಟ ಬಾಣ ಮನಕ್ಕೆ ನಾಟದಂತೆ ಬರೆದವರು ಬಹುಬೇಗ ಓದುಗರ ಮರವೆಯ ಕಾಡಿನಲ್ಲಿ ಕಳೆದು ಹೋಗುತ್ತಾರೆ.

ಅರ್ಥದ ಹಲವು ಪದರುಗಳಿಲ್ಲದ, ಬದುಕಿನ ಹತ್ತಾರು ಕ್ಷೇತ್ರಗಳ ಬೆಳಕಿನಕಿಂಡಿಗಳಿಂದ ಹಾದು ಬರದ ಬರವಣಿಗೆ ಬರಿದೆ ಸಮಯ ವ್ಯರ್ಥ ಮಾಡುತ್ತಿರುತ್ತದೆ. ದ್ವಂದ್ವಾತ್ಮಕ ಗ್ರಹಿಕೆ ಉಳ್ಳ, ನಮ್ಮನ್ನು ನಿಂತಲ್ಲಿ ನಿಲ್ಲಲು ಬಿಡದ, ಓದಿದಾಗಲೆಲ್ಲ ನಮ್ಮನ್ನು ಮುದಗೊಳಿಸುವ ಸಾಹಿತ್ಯ ಮಾತ್ರ ನಮ್ಮನ್ನು ಪೊರೆಯಬಲ್ಲುದು. ಪ್ರಶಸ್ತಿಗಳ, ವಿಮರ್ಶಕರ ಹೊಗಳಿಕೆಯ ಕಿರೀಟ ತೊಟ್ಟು ಕುಣಿದಾಡುವ ಕೃತಿಗಳನ್ನು ಕಿಲಾಡಿ ಓದುಗರು ದೂರದಿಂದಲೇ ನೋಡಿ ನಗುತ್ತಿರುತ್ತಾರೆ.

**ಸಂದೀಪ ನಾಯಕ**